PCR.No.19/2022
CW-2

<u>ದಿನಾಂಕಃ**18-07-2024** ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಆರ್.ಆರ್.ಎಸ್. ವಕೀಲರಿಂದಃ-</u>

ನಾನು ಪೆನ್ಷನ್ ಮೊಹಲ್ಲಾದಲ್ಲಿ ವಾಸವಿರುತ್ತೇನೆ. ನಾನು **10** ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಖಾತಾ ಬದಲಾವಣೆಗೆ ಏನೆಲ್ಲಾ ದಾಖಲಾತಿಗಳನ್ನ ಕೊಡಬೇಕು ಎಂದು ನನಗೆ ಮಾಹಿತಿ ಇದೆ. ಸಾಕ್ಷಿ ಮುಂದುವರಿದು ನಾನು ನಗರಸಭೆಯಲ್ಲಿ ವಾಟರ್ ಸಪ್ಲೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎನ್ನುತ್ತಾರೆ. ಪಿರ್ಯಾದುದಾರರು ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿ ನನ್ನ ವಸತಿಗೃಹ ಪಿರ್ಯಾದುದಾರರ ಮನೆಯ ಎದುರುಗಡೆ ಇದೆ ಆದ್ದರಿಂದ ಗೊತ್ತು ಎನ್ನುತ್ತಾರೆ. ಆರೋಪಿ ನನಗೆ ಪರಿಚಯ ಇಲ್ಲ. ಪಿರ್ಯಾದುದಾರರ ತಾಯಿಯ ಹೆಸರು ಲಕ್ಷ್ಮಮ್ಮ. ಪಿರ್ಯಾದುದಾರ ತಾಯಿ ಲಕ್ಷ್ಮಮ್ಮ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ತೀರಿಕೊಂಡ ನಂತರ ಆರೋಪಿ ಪಿರ್ಯಾದುದಾರ ತಂದೆಯಾದ ಬಿ.ಆರ್.ಮಂಜಶೆಟ್ಟಿ ಇವರ ಜೊತೆ ದಿಃ**25.06.1999** ರಂದು ವಿವಾಹವಾಗಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ಸತ್ಯಾಂಶವನ್ನ ಮರೆಮಾಚಿ ತನ್ನ ಹೆಸರಿಗೆ ಆಸ್ತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಪಿರ್ಯಾದುದಾರರು ನನಗೆ ಮಾಹಿತಿ ತಿಳಿಸಿದ್ದರಿಂದ ತಿಳಿದುಕೊಂಡಿರುತ್ತೇನೆ. ಪಿರ್ಯಾದುದಾರರು ಈ ವಿಚಾರವನ್ನ ಯಾವ ದಿನಾಂಕದಂದು ನನಗೆ ಮಾಹಿತಿ ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಯಾವ ವರ್ಷ ಆ ರೀತಿ ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆರೋಪಿ ಖಾತೆ ಬದಲಾವಣೆ ಕೋರಿ ಸಲ್ಲಿಸಿದ್ದ ಅರ್ಜಿ ಮತ್ತು ದಾಖಲೆಯನ್ನ ನಾನು ಖುದ್ದಾಗಿ ನೋಡಿಲ್ಲ ಮತ್ತು ಪರಿಶೀಲನೆ ಮಾಡಿಲ್ಲ. ಆರೋಪಿ ಯಾವ ನಂಬರ್ ನ ಆಸ್ತಿಯ ಖಾತೆ ಬದಲಾವಣೆಗೆ ಪ್ರಯತ್ನಪಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಮೋಸದಿಂದ ಆಸ್ತಿ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದು

ಹೇಳಲಾದ ವಿಚಾರವನ್ನ ನಾನು ಖುದ್ದು ನೋಡಿಲ್ಲ ಮತ್ತು ನಾನು ಖುದ್ದು ಪರಿಶೀಲನೆ ಮಾಡಿಲ್ಲ. ಸಾಕ್ಷಿ ಮುಂದುವರಿದು ಪಿರ್ಯಾದುದಾರರು ಆ ವಿಚಾರವನ್ನ ಹೇಳಿದ್ದಾರೆ ಎನ್ನುತ್ತಾರೆ. ಆರೋಪಿ ಹೆಸರಿಗೆ ಆಸ್ತಿ ಖಾತೆ ವರ್ಗಾವಣೆಯಾಗುವ ಪೂರ್ವದಲ್ಲಿ ಪಿರ್ಯಾದುದಾರರು ಮತ್ತು ಅವರ ತಂಗಿ ಲತಾ ಇವರ ಹೆಸರಿನಲ್ಲಿ ಇತ್ತು. ಸದರಿ ದಾಖಲೆಯನ್ನ ನಾನು ನೋಡಿಲ್ಲ. ಪಿರ್ಯಾದುದಾರರು ಮತ್ತು ಅವರ ತಂದೆ ಬಿ.ಆರ್.ಮಂಜಶೆಟ್ಟಿ ಇವರ ನಡುವೆ ದಿಃ**21.06.1999** ರಂದು ನೊಂದಾಯಿತ ಪಾಲುಪಾರಿಕತ್ತು ಆಗಿತ್ತು ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪಾಲುಪಟ್ಟಿಯಲ್ಲಿ ಮಂಜುನಾಥ ಕೃಪ, ಲಕ್ಷ್ಮಿ ನಿವಾಸ ಆಸ್ತಿ ಸಂಖ್ಯೆಃ**7679,** ಹಳೆ ಖಾತೆ ನಂ**.5775/337** ಮಂಜಶೆಟ್ಟಿ ಇವರ ಹಿಸ್ಸೆಗೆ ಬಂದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಮಲ್ಲಿಕಾರ್ಜುನ ಕೃಪ ಅನ್ನಪೂರ್ಣೇಶ್ವರ ನಿಲಯ ಖಾತಾ ನಂ**.7741,** ಹಳೆ ಖಾತೆ ನಂ**.5835/3421** ಪಿರ್ಯಾದುದಾರರ ಹಿಸ್ಸೆಗೆ ಬಂದಿತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಪಿರ್ಯಾದುದಾರರು ಪಾಲುಪಟ್ಟಿಯಲ್ಲಿ ತಮ್ಮ ಹಿಸ್ಸೆಗೆ ಬಂದ ಮಲ್ಲಿಕಾರ್ಜುನ ಕೃಪ, ಅನ್ನಪೂರ್ಣೇಶ್ವರಿ ನಿಲಯದಲ್ಲಿ ವಾಸವಿದ್ದಾರೆ ಎಂದರೆ ಸರಿ. ಮಂಜುನಾಥ ಕೃಪ, ಲಕ್ಷ್ಮಿ ನಿವಾಸ ಇದು ವಿಭಾಗ ಪತ್ರದ ಆಧಾರದ ಮೇಲೆ ಬಿ.ಆರ್.ಮಂಜಶೆಟ್ಟಿ ಇವರ ಹೆಸರಿಗೆ ಖಾತಾ ಆಗಿದೆ ಎಂದರೆ ಸರಿ. ಪಿರ್ಯಾದುದಾರರು ಮತ್ತು ಆತನ ತಂಗಿ ಹೆಸರಿನಲ್ಲಿ ಯಾವಾಗ ಮತ್ತು ಯಾವ ಆಧಾರದ ಮೇಲೆ ಖಾತಾ ಆಗಿದೆ ಎಂದು ನನಗೆ ಗೊತ್ತಿಲ್ಲ. ಪಿರ್ಯದುದಾರರು ಮತ್ತು ಅವರ ಸಹೋದರಿ ಹೆಸರಿನಲ್ಲಿ ಆಸ್ತಿ ಖಾತೆ ಆದಾಗ ಬಿ.ಆರ್.ಮಂಜಶೆಟ್ಟಿ ಜೀವಂತ ಇದ್ದರೋ ಅಥವಾ ತೀರಿಕೊಂಡಿದ್ದರೋ ಎಂದು ನನಗೆ ಮಾಹಿತಿ ಇಲ್ಲ. ಯಾವ ದಿನಾಂಕದಂದು ಪಿರ್ಯಾದುದಾರ ಹೆಸರಿಗೆ ಖಾತಾ ಆಗಿದೆ ಎಂದು ನನಗೆ ಗೊತ್ತಿಲ್ಲ. ಮಂಜಶೆಟ್ಟಿ ಇವರು ದಿಃ**01.04.2010** ರಲ್ಲಿ ತೀರಿಕೊಂಡಿರುತ್ತಾರೆ.

ಆರೋಪಿ ತನ್ನ ಹೆಸರಿಗೆ ಆಸ್ತಿ ಖಾತೆ ಮಾಡಿಸಿಕೊಂಡು ನ್ಯಾಯಾಲಯದಲ್ಲಿ ಆಸ್ತಿ ತನಗೆ ಸೇರಬೇಕು ಎಂದು ಕೇಳಿದ ವಿಚಾರವನ್ನ ಪಿರ್ಯಾದುದಾರರು ನನಗೆ ನಮ್ಮ ಕಛೇರಿಗೆ ಬಂದಿದ್ದಾಗ ತಿಳಿಸಿರುತ್ತಾರೆ. ಯಾವ ಆಧಾರದ ಮೇಲೆ ಆರೋಪಿ ಪಿರ್ಯಾದುದಾರರ ವಿರುದ್ಧ ದಾವೆ ಹೂಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ಮಂಜಶೆಟ್ಟಿ ಇವರು ತಾವು ತೀರಿಕೊಳ್ಳುವ ಮೊದಲು ತಮ್ಮ ಹಿಸ್ಸೆಗೆ ಬಂದಿದ್ದ ಮಂಜುನಾಥ ಕೃಪ, ಲಕ್ಷ್ಮಿ ನಿವಾಸ ಇದರ ಸಂಬಂಧ ನೊಂದಾಯಿತ ಉಯಿಲನ್ನ ಆರೋಪಿ ಪರ ಬರೆದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಿಲ್ ಆಧಾರದ ಮೇಲೆ ಖಾತೆ ಬದಲಾವಣೆ ಮಾಡುವ ಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರ ವಿಲ್ ಮತ್ತು ಮರಣ ಪ್ರಮಾಣ ಪತ್ರ ಬರೆದುಕೊಟ್ಟವರ ಮರಣ ಪ್ರಮಾಣ ಪತ್ರವನ್ನ ಬರೆದು ಖಾತೆ ಬದಲಾವಣೆ ಮಾಡುತ್ತಾರೆ ಎಂದರೆ ಸರಿ. ಆರೋಪಿ ವಿಲ್ ಮತ್ತು ಆಕೆಯ ಗಂಡನ ಮರಣ ಪ್ರಮಾಣ ಪತ್ರವನ್ನ ಕೊಟ್ಟು ಖಾತೆ ಬದಲಾವಣೆ ಕೋರಿ ದಿಃ**10.11.2010** ರಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ಸಲ್ಲಿಸಿದ್ದ ಅರ್ಜಿಗೆ ಪಿರ್ಯಾದುದಾರರು ದಿಃ**11.12.2010** ರಂದು ತಕರಾರು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಿಃ**02.02.2011** ರಂದು ನಗರಸಭೆಯವರು ಉಯಿಲಿನ ಆಧಾರದ ಮೇಲೆ ಆರೋಪಿ ಹೆಸರಿಗೆ ಖಾತೆ ಬದಲಾವಣೆ ಮಾಡಬಹುದಾ ಎಂದು ಕಾನೂನು ಸಲಹೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅದರ ಆಧಾರದ ಮೇಲೆ ಆರೋಪಿ ಹೆಸರಿನಲ್ಲಿ ಆಸ್ತಿಯ ಖಾತೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆರೋಪಿ ನ್ಯಾಯಾಲಯದ ಮುಂದೆ ಸಲ್ಲಿಸಿದ ದಾವೆಯಲ್ಲಿ ವಿಚಾರಣೆ ನಂತರ ಆರೋಪಿ ಆಸ್ತಿಯ ಹಕ್ಕುದಾರಳು ಎಂದು ತೀರ್ಮಾನ ಮಾಡಿದೆ ಎಂದರೆ

**ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಪಿರ್ಯಾದುದಾರರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.**

**ಮರು ಸವಾಲುಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

PCR.No.19/2022
CW-2